

# ಬಿಸಿಲನಾಡಿನ ಹುಡುಗನ ಬೆಳದಿಂಗಳ ಕನಸು

**ಸಿನಿಮಾದೊಟ್ಟಿಗೆ ಸಾಹಿತ್ಯ ಕ್ಷೇತ್ರದಲ್ಲಿಯೂ ಗಮನಸೆಳೆಯುತ್ತಿರುವ ಯುವಪ್ರತಿಭೆ ಪ್ರವೀಣ್ ಕುಮಾರ್ ಜಿ. ಸ್ವತಂತ್ರವಾಗಿ ಸಿನಿಮಾವನ್ನು ನಿರ್ದೇಶಿಸುವ ಹುಮ್ಮಸ್ಸಿನಲ್ಲಿರುವ ಅವರಿಗೆ ತಮ್ಮ ನಿರ್ದೇಶನದಲ್ಲಿ ಎಂಥ ಸಿನಿಮಾಗಳು ಬರಬೇಕು ಎಂಬುದು ಸ್ಪಷ್ಟವಾಗಿ ಗೊತ್ತಿದೆ.**

■ ಪದ್ಮನಾಭ ಭಟ್

ಕನ್ನಡ ಸಿನಿಮಾ ಮತ್ತು ಸಾಹಿತ್ಯದ ನಡುವಿನ ಅನ್ಯೋನ್ಯ ಸಂಬಂಧ ಕಡಿದುಹೋಗಿ ಎಷ್ಟೋ ಕಾಲವಾಗಿದೆ. ಸಾಹಿತ್ಯಲೋಕಕ್ಕೆ ವ್ಯಾಪಾರಿ ಸಿನಿಮಾಗಳೆಂದರೆ ಅಗ್ಗದ ಅಭಿರುಚಿ ಎಂದೂ, ಸಿನಿಮಾದವರಿಗೆ ಸಾಹಿತ್ಯ ಎಂದರೆ ಒಗ್ಗದ ಅಭಿರುಚಿ ಎಂದೂ ಅಭಿಪ್ರಾಯ ಬೆಳೆದುಬಿಟ್ಟಿದೆ. ಆದರೂ ಈ ಎರಡೂ ಜಗತ್ತಿನ ನಡುವಿನ ಕಂದರಕ್ಕೆ ಆಗೀಗ ಸೇತುವೆ ನಿರ್ಮಾಣವಾಗುವುದೂ ಇದೆ.

ಹೀಗೆ ಸಿನಿಮಾ ಮತ್ತು ಸಾಹಿತ್ಯ ಎರಡೂ ಲೋಕದ ಸೇತುವೆಯಂತೆ ಕಾಣಿಸುವವರು ಪ್ರವೀಣ್ ಕುಮಾರ್ ಜಿ. ಬಳ್ಳಾರಿಯ ಬಿಸಿಲ ಸೀಮೆಯಿಂದ ಬಂದಿರುವ ಪ್ರವೀಣ್, ಸಿನಿಮಾಲೋಕದಲ್ಲಿ ಬೆಳದಿಂಗಳ ಕನಸು ಕಾಣುತ್ತಿದ್ದಾರೆ. ಅವರ ಕನಸು ಕೈಗೂಡುವ ಗಳಿಗೆಯೂ ಹತ್ತಿರದಲ್ಲಿಯೇ ಇದೆ.

ಚಿಕ್ಕಂದಿನಿಂದಲೂ ಪ್ರವೀಣ್‌ಗೆ ಸಿನಿಮಾಗಳನ್ನು ನೋಡುವ ಹವ್ಯಾಸವಿತ್ತು. ಸಿನಿಮಾ ನೋಡಿದ ಮೇಲೆ ಎಲ್ಲರೂ ನಾಯಕ ನಾಯಕಿಯರ ಗುಣಗಾನದಲ್ಲಿ ತೊಡಗಿದ್ದರೆ, ಪ್ರವೀಣ್ ನಿರ್ದೇಶನ, ಕಥೆ ಯಾರದ್ದು ಎಂಬ ಕುತೂಹಲದಲ್ಲಿ ಹಣಕುತ್ತಿದ್ದರು. ಯಾವ ಸಿನಿಮಾವನ್ನು ಯಾರು ನಿರ್ದೇಶಿಸಿದ್ದಾರೆ, ಅದಕ್ಕೆ ಯಾರು ಕಥೆ ಬರೆದಿದ್ದಾರೆ ಎಂಬ ಮಾಹಿತಿಯನ್ನೆಲ್ಲ ಬರೆದಿಟ್ಟುಕೊಳ್ಳುತ್ತಿದ್ದರು.

ಎಂಜಿನಿಯರಿಂಗ್ ಓದಲೆಂದು ಬೆಂಗಳೂರಿಗೆ ಬಂದ ಪ್ರವೀಣ್‌ಗೆ ಹೊಸದೇ ಒಂದು ಜಗತ್ತು ತೆರೆದುಕೊಂಡಿತು. ಎಂಜಿನಿಯರಿಂಗ್ ಕಾಲೇಜಿನ ಸಮಾನ ಮನಸ್ಕ ಗೆಳೆಯರೆಲ್ಲ ಸೇರಿಕೊಂಡು 'ನಥಿಂಗ್ ಬಟ್ ಟ್ರಬಲ್' ಎಂಬ ತಂಡ ಕಟ್ಟಿಕೊಂಡು ಮ್ಯಾಡ್ ಆ್ಯಡ್ ಶೋ ಕೊಡಲು ಆರಂಭಿಸಿದರು. 2007ರಿಂದ 2010ರವರೆಗೆ ಸುಮಾರು ಅರವತ್ತೆಪ್ಪತ್ತು ಶೋಗಳನ್ನು ಕೊಟ್ಟಿದ್ದಾರೆ. ಆ ತಂಡದಲ್ಲಿ ಪ್ರವೀಣ್ ಸ್ಕಿಟ್ ಬರೆಯುವುದರ ಜೊತೆಗೆ ನರೇಟರ್ ಆಗಿ ಕೆಲಸ ಮಾಡುತ್ತಿದ್ದರು.

ಎಂಜಿನಿಯರಿಂಗ್ ಮುಗಿಯುವ ಹೊತ್ತಿಗೆ ಸಿನಿಮಾ ಮೇಲಿನ ಪ್ರೀತಿ ದುಪ್ಪಟ್ಟಾಗಿತ್ತು. ಹಾಗಾಗಿ ಕೆಲಸ ಹುಡುಕುವ ಸಹವಾಸಕ್ಕೆ ಹೋಗದೆ ಕರ್ನಾಟಕ ಫಿಲಂ ಡೈರೆಕ್ಷನ್ ಅಸೋಸಿಯೇಷನ್‌ನಲ್ಲಿ ಆರು ತಿಂಗಳ ನಿರ್ದೇಶನ ಕೋರ್ಸ್ ಮಾಡಿದರು.

ಪ್ರವೀಣ್, ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ ಮೊದಲ ಸಿನಿಮಾ, ಗಿರೀಶ ಕಾಸರವಳ್ಳಿ ನಿರ್ದೇಶನದ 'ಕೂರ್ಮಾವತಾರ'. ನಂತರ ಬಿ. ಸುರೇಶ್ ನಿರ್ಮಾಣದ, ಅಭಯ ಸಿಂಹ ನಿರ್ದೇಶನದ 'ಸಕ್ಕರೆ' ಸಿನಿಮಾಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದರು. ಅದಾದ ಮೇಲೆ ಮಹೇಶ್ ರಾವ್ ಅವರ ನಿರ್ದೇಶನದ ರೀಮೇಕ್ ಚಿತ್ರ, 'ಎಂದೆಂದೂ ನಿನಗಾಗಿ'ದಲ್ಲಿಯೂ ಕೆಲಸ ಮಾಡಿದರು.

'ನಾನು ಬರವಣಿಗೆ, ಸ್ಕ್ರಿಪ್ಟ್, ಕಥೆ ಎಲ್ಲದರ ಬಗ್ಗೆಯೂ ಸಾಕಷ್ಟು ಗಂಭೀರವಾಗಿ ತೊಡಗಿಸಿಕೊಳ್ಳಲು ಅವಕಾಶ ಸಿಕ್ಕಿದ್ದು ಯೋಗರಾಜ ಭಟ್ ಅವರ ತಂಡಕ್ಕೆ ಸೇರಿಕೊಂಡ ಮೇಲೆ' ಎನ್ನುತ್ತಾರೆ ಪ್ರವೀಣ್. 'ದನ ಕಾಯೋನು' ಸಿನಿಮಾದಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದ ಅವರು ಅಲ್ಲಿಂದ ಇಲ್ಲಿಯವರೆಗೆ ಭಟ್ಟರ ಎಲ್ಲ ಸಿನಿಮಾಗಳಲ್ಲಿಯೂ ಕೆಲಸ ಮಾಡಿದ್ದಾರೆ.

'ನಾನು ಸಹಾಯಕ ನಿರ್ದೇಶಕನಾಗುವ ಹಂತದಲ್ಲಿಯೇ, ಸಾಧ್ಯವಾದಷ್ಟೂ ಬೇರೆ ಬೇರೆ ರೀತಿಯ ನಿರ್ದೇಶಕರ ಜೊತೆಗೆ ಕೆಲಸ ಮಾಡಬೇಕು ಅಂದುಕೊಂಡಿದ್ದೆ. ಅದು ಸಾಧ್ಯವಾಯ್ತು. ಕಾಸರವಳ್ಳಿ, ಮಹೇಶ್ ರಾವ್, ಬಿ. ಸುರೇಶ್, ಅಭಯ ಸಿಂಹ, ಯೋಗರಾಜ ಭಟ್ ಇವರೆಲ್ಲರೂ ಸಿನಿಮಾವನ್ನು ನೋಡುವ ರೀತಿಯಲ್ಲಿ ಒಬ್ಬರಿಗಿಂತ ಇನ್ನೊಬ್ಬರು ಭಿನ್ನ. ಅವರ ಶೈಲಿ, ಅಭಿರುಚಿಗಳು, ಓದುವ ಪುಸ್ತಕಗಳು, ನೋಡುವ ಸಿನಿಮಾಗಳು ಎಲ್ಲವೂ ಭಿನ್ನ. ಹಾಗಾಗಿಯೇ ನಾನು ಎಲ್ಲರಿಂದಲೂ ಸಾಕಷ್ಟು ವಿಷಯಗಳನ್ನು ಕಲಿತುಕೊಳ್ಳಲು ಸಾಧ್ಯವಾಯ್ತು' ಎನ್ನುತ್ತಾರೆ ಪ್ರವೀಣ್.

ಈಗ ಅವರು ಸ್ವತಂತ್ರವಾಗಿ ಸಿನಿಮಾವೊಂದನ್ನು ನಿರ್ದೇಶಿಸುವ ಹುಮ್ಮಸ್ಸಿನಲ್ಲಿದ್ದಾರೆ. ಕೆಲವು ಸ್ನೇಹಿತರೇ ಸೇರಿಕೊಂಡು 'ಒಲವು' ಎಂಬ ಸಿನಿಮಾ ನಿರ್ಮಾಣ ಸಂಸ್ಥೆ ಆರಂಭಿಸಿದ್ದು, ಅದರ ಅಡಿಯಲ್ಲಿಯೇ ಪ್ರವೀಣ್ ನಿರ್ದೇಶನದ ಮೊದಲ ಸಿನಿಮಾ ನಿರ್ಮಾಣವಾಗುತ್ತಿದೆ.

ಮೊದಲ ಪ್ರಯತ್ನದಲ್ಲಿ ಒಂದು ರೊಮ್ಯಾಂಟಿಕ್ ಪ್ರೇಮಕಥೆಯನ್ನು ಹೇಳಲು ಹೊರಟಿದ್ದಾರೆ. ಬಳ್ಳಾರಿ ಸೀಮೆಯಲ್ಲಿ ನಡೆಯುವ ಕಥೆ ಇದಂತೆ. ಹಾಗಾಗಿ ಅಲ್ಲಿಯೇ ಚಿತ್ರೀಕರಣ ನಡೆಸಲು ತೀರ್ಮಾನಿಸಿದ್ದಾರೆ. 'ಇದು ಬಿಸಿಲಸೀಮೆಯಲ್ಲಿ ನಡೆಯುವ ಕಥೆ. ಹಾಗಂತ ಅಲ್ಲಿನ ಬಹುತೇಕ ಸಿನಿಮಾಗಳಂತೆ ಕ್ರೈಂ ಕಥೆ ಇದಲ್ಲ. ಬಿಸಿಲಸೀಮೆಯ ಬೆಳದಿಂಗಳಿನಂಥ ಪ್ರೇಮಕಥೆ ಇಲ್ಲಿದೆ' ಎನ್ನುವ ಅವರು ಮಾರ್ಚ್ ತಿಂಗಳ ಅಂತ್ಯದಲ್ಲಿ ಚಿತ್ರೀಕರಣ ಆರಂಭಿಸುವ ಯೋಜನೆಯನ್ನು ಹಾಕಿಕೊಂಡಿದ್ದಾರೆ.

'ನಾನು ಯಾವುದೋ ಒಂದು ಜಾನರ್‌ಗೆ ಅಂಟಿಕೊಳ್ಳುವ ನಿರ್ದೇಶಕ ಅಲ್ಲ' ಎನ್ನುವ ಪ್ರವೀಣ್ ಅವರಿಗೆ ಮುಂದೆ ಜನರು ತಮ್ಮನ್ನು ಎಂಥ ಸಿನಿಮಾಗಳ ಮೂಲಕ ಗುರ್ತಿಸಬೇಕು ಎಂಬ ಕುರಿತು ಸ್ಪಷ್ಟತೆ ಇದೆ. 'ಸಿನಿಮಾದಲ್ಲಿ ಕಂಟೆಂಟ್ ಮುಖ್ಯವಾಗಬೇಕು. ಸಿನಿಮಾ ನೋಡಿದ ಮೇಲೆ ಜನರಿಗೆ ಕಥೆ ಕಾಡಬೇಕು, ಕಲಾವಿದರ ನಟನೆ ಕಾಡಬೇಕು. ಆದಷ್ಟೂ ಕಡಿಮೆ ತಾರ್ಕಿಕ ತಪ್ಪುಗಳನ್ನು ಇಟ್ಟುಕೊಂಡು ಸಿನಿಮಾ ಮಾಡಬೇಕು' ಎನ್ನುವುದು ಅವರ ಆಸೆ.

ಸಿನಿಮಾ ಮಾಧ್ಯಮದಲ್ಲಿ ಈಗಷ್ಟೇ ಸ್ವತಂತ್ರ ಹೆಜ್ಜೆ ಇಡುತ್ತಿರುವ ಪ್ರವೀಣ್ ಸಾಹಿತ್ಯಲೋಕದಲ್ಲಿಯೂ ತಮ್ಮ ಕಥೆಗಳ ಮೂಲಕ ಗಮನಸೆಳೆಯುತ್ತಿದ್ದಾರೆ. ಈಗಾಗಲೇ ಅವರ ಕಥೆಗಳು ಪ್ರಜಾವಾಣಿ, ಸುಧಾ, ಮಯೂರ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹಲವು ಸ್ಪರ್ಧೆಗಳಲ್ಲಿಯೂ ಬಹುಮಾನ ಗಳಿಸಿಕೊಂಡಿವೆ. ಸಾಹಿತ್ಯದ ಗಟ್ಟಿತನದೊಟ್ಟಿಗೆ ಸಿನಿಮಾ ಕ್ಷೇತ್ರದಲ್ಲಿ ಬೆಳೆಯಲು ಹೊರಟಿರುವ ಪ್ರವೀಣ್ ಅವರಿಂದ ಸೂಕ್ಷ್ಮ ಸಂವೇದನೆಯ ಸಿನಿಮಾಗಳನ್ನು ಖಂಡಿತ ನಿರೀಕ್ಷಿಸಬಹುದು. ■